ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ ೨೮ನೇ ಮಾರ್ಚ್ ೧೯೯೦, ಚೈತ್ರ ೭, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು.]

ಹೊಸ ವರ್ಷದ ಶುಭಾಶಯಗಳು

ಅಧ್ಯಕ್ಷರು.—ಸನ್ಮಾನ್ಯ ಸದಸ್ಯರೇ, ಶ್ರೀ ಪ್ರಭೋದೂತನಾಮ ಸಂವತ್ಸರದ ಮೊದಲನೇ ದಿವಸ ನಾವೆಲ್ಲಾ ಇಲ್ಲಿ ಸೇರುತ್ತಾ ಇದ್ದೇವೆ. ಮಾನ್ಯ ಸದಸ್ಯರಿಗೆ ಮತ್ತು ರಾಜ್ಯದ ಎಲ್ಲರಿಗೂ ಈ ಸಂವತ್ಸರ ಸುಖ ಸಂತೋಷಗಳನ್ನು ತರಲಿ ಎಂದು ಹಾರೈಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಸದಸ್ಯರ ಪರವಾಗಿ ತಮಗೂ ಶ್ರೀ ಪ್ರಭೋದೂತನಾಮ ಸಂವತ್ಸರ ಸುಖ ಸಂತೋಷಗಳನ್ನು ತರಲಿ ಎಂದು ಹಾರೈಸುತ್ತೇನೆ.

ಅಧ್ಯಕ್ಷರು.—ಈ ಆಯವ್ಯಯದ ಮೇಲೆ ಒಟ್ಟು ೧೨೬೦ ನಿಮಿಷಗಳ ಚರ್ಚೆಯಾಗಿದೆ. ಒಟ್ಟು ೪೩ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ ಅದರಲ್ಲಿ ಕಾಂಗ್ರೆಸ್ ಸದಸ್ಯರು ಕೇವಲ ೫೪೨ ನಿಮಿಷ ಮಾತ್ರ ತೆಗೆದುಕೊಂಡಿದ್ದಾರೆ. ಜನತಾದಳದ ಸದಸ್ಯರು ೪೩೩ ನಿಮಿಷ ಬಿ.ಜೆ.ಪಿ ಸದಸ್ಯರು ೬೫ ನಿಮಿಷ ಜನತಾ ಪಕ್ಷದ ಸದಸ್ಯರು ೭೫ ನಿಮಿಷ, ರೈತ ಸಂಘದ ಸದಸ್ಯರು ೬೫ ನಿಮಿಷ, ವಂಯಸ್ಸಿಂಲೀಗ್‌ನವರು ೨೫ ನಿಮಿಷ, ಎಐಡಿಎಂಕೆ ಪಕ್ಷದ ಸದಸ್ಯರು ೩ ನಿಮಿಷ ಪಕ್ಷೇತರರು ೫೨ ನಿಮಿಷಗಳನ್ನು ತೆಗೆದುಕೊಂಡಿದ್ದಾರೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

(ಮಂತ್ರಿಯವರಿಂದ ಉತ್ತರ)

† ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ೧೯೯೦-೯೧ ಸಾಲಿನ ಬಜೆಟ್ ಮಂಡನೆ ಮಾಡಿದ ಮೇಲೆ ಈ ಸಭೆಯ ಮಾನ್ಯ ಸದಸ್ಯರು ಯಾವ ಸದ್ದುಗದ್ದಲ ಇಲ್ಲದೆ ಶಾಂತಯುತವಾಗಿ ಚರ್ಚೆಯನ್ನು ನಡೆಸಿದ್ದಾರೆ. ಅವರು ಚರ್ಚೆ ಮಾಡುವ ಕಾಲದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವು ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು. ಈ ಸಾಲಿನ ಬಜೆಟ್ ಅನ್ನು ಮಂಡಿಸುವ ಕಾಲದಲ್ಲಿ ಬಜೆಟ್ ಕೊರತೆಯನ್ನು ಬಹಳ ಮಟ್ಟಿಗೆ ಕಡಿಮೆ ಮಾಡಿದ್ದೇವೆ. ಇದರ ಮೂಲ ಉದ್ದೇಶ ವೇನೆಂದರೆ ಬಜೆಟ್ ಕೊರತೆ ಜಾಸ್ತಿ ಇದ್ದರೆ ಅದು ಯಾವಾಗಲೂ ಹಣದುಬ್ಬರಕ್ಕೆ ನಾಂದಿಯನ್ನು ಹಾಕಿದ ಹಾಗೆ. ಹಣದುಬ್ಬರ ಕಡಿಮೆ ಮಾಡಬೇಕೆಂಬ ಸದುದ್ದೇಶದಿಂದ ಕೊರತೆ

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.